**ಕರ್ನಾಟಕ ಸರ್ಕಾರ**
**ಕೃಷಿ ಇಲಾಖೆ**

**ಸಂಖ್ಯೆ: ಆಬೆವಿ/ಭೂಚೇತನ.ಹಿಂ.ಮಾ/2013-14**

**ಕೃಷಿ ನಿರ್ದೇಶನಾಲಯ**
**ಶೇಷಾದ್ರಿ ರಸ್ತೆ, ಬೆಂಗಳೂರು-01**
**ದಿನಾಂಕ: 24.09.2013**

**<u>ಸುತ್ತೋಲೆ-07</u>**

**ವಿಷಯ: 2013 ಹಿಂಗಾರು ಹಂಗಾಮಿನ ಭೂಚೇತನ ಯೋಜನೆ ಅನುಷ್ಠಾನ ಮಾರ್ಗಸೂಚಿ .**

*****

ಭೂಚೇತನ ಯೋಜನೆಯನ್ನು ಎರಡನೆ ಹಂತದಲ್ಲಿ 2013-2017 ರ ವರೆಗೆ ಐದು ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಸರ್ಕಾರದಿಂದ ಮಂಜೂರಾತಿ ನೀಡಲಾಗಿದೆ. ಈ ಅವಧಿಯಲ್ಲಿ ಕೃಷಿ ಉತ್ಪಾದನೆಯನ್ನು ಶೇ. 20ರಷ್ಟು ಹೆಚ್ಚಿಸುವ ಗುರಿ ಹೊಂದಲಾಗಿದೆ. ಖುಷ್ಕಿ ಪ್ರದೇಶದೊಂದಿಗೆ ಈ ಯೋಜನೆಯನ್ನು ನೀರಾವರಿ ಪ್ರದೇಶಕ್ಕೆ ವಿಸ್ತರಿಸುವುದು, ಪ್ರಸಕ್ತ ಸನ್ನಿವೇಶದಲ್ಲಿ ಆಗುತ್ತಿರುವ ಹವಾಮಾನ ಬದಲಾವಣೆಗಳನ್ನು ವಿಶ್ಲೇಷಿಸಿ ತಾಂತ್ರಿಕತೆಗಳನ್ನು ಬಲಪಡಿಸುವುದು, ರೈತರಿಗೆ ಉತ್ತಮ ಗುಣಮಟ್ಟದ ಬೀಜಗಳು ದೊರೆಯುವಂತೆ ಗ್ರಾಮ ಮಟ್ಟದಿಂದ ಬೀಜೋತ್ಪಾದನಾ ಕಾರ್ಯಕ್ರಮಗಳನ್ನು ರೂಪಿಸುವುದು, ಆಧುನಿಕ ಮಾಹಿತಿ ತಂತ್ರಜ್ಞಾನಗಳಿಂದ ರೈತರ ಸಮಸ್ಯೆಗಳಿಗೆ ಸಮಂಜಸವಾದ ಪರಿಹಾರ ಒದಗಿಸುವುದು, ಈ ಯೋಜನೆಯಲ್ಲಿ ಪಾಲ್ಗೊಳ್ಳುವ ಸಂಸ್ಥೆಗಳ, ವಿಸ್ತರಣಾ ಅಧಿಕಾರಿಗಳ ಹಾಗೂ ರೈತರ ಸಾಮರ್ಥ್ಯವನ್ನು ಹೆಚ್ಚಿಸುವುದು ಭೂಚೇತನ ಯೋಜನೆಯ ಎರಡನೆಯ ಹಂತದ ಮುಖ್ಯ ಉದ್ದೇಶಗಳಾಗಿರುತ್ತವೆ.

**<u>ಯೋಜನೆಯ ಪ್ರಮುಖ ಅಂಶಗಳು :</u>**

- ಮಣ್ಣು ಫಲವತ್ತತೆ ಆಧಾರಿತ ಪೋಷಕಾಂಶಗಳ ಶಿಫಾರಸ್ಸು.
- ಉತ್ತಮ ತಾಂತ್ರಿಕತೆಗಳಾದ ಮಣ್ಣು ಪರೀಕ್ಷೆ ಆಧಾರಿತ ಸಮತೋಲನ ಪೋಷಕಾಂಶ, ಸುಧಾರಿತ ತಳಿಗಳು, ಮಣ್ಣು ಮತ್ತು ಮಳೆ ನೀರು ಸಂರಕ್ಷಣೆ, ಸಮಗ್ರಪೀಡೆ ನಿರ್ವಹಣೆ ಬಗ್ಗೆ ಅರಿವು ಮೂಡಿಸಲು ಗೋಡೆ ಬರಹ, ಗ್ರಾಮ ಸಭೆಗಳು, ತರಬೇತಿ, ಕ್ಷೇತ್ರೋತ್ಸವ, ಜಾನಪದ, ಬೀದಿನಾಟಕ, ಲೇಖನ ಮತ್ತಿತರೆ ಪ್ರಚಾರ ಸಾಮಾಗ್ರಿಗಳ ಬಳಕೆ.
- ಕೃಷಿ ಪರಿಕರಗಳನ್ನು ರಿಯಾಯಿತಿ ದರದಲ್ಲಿ ಗ್ರಾಮ/ಗುಚ್ಛಗ್ರಾಮದ ಮಟ್ಟದಲ್ಲಿ ದಾಸ್ತಾನು ಮತ್ತು ವಿತರಣೆ.
- ಗ್ರಾಮ ಮಟ್ಟದಲ್ಲಿ ರೈತರಿಗೆ ತಾಂತ್ರಿಕ ಸಲಹೆ ನೀಡಲು ರೈತ ಅನುವುಗಾರರ ಬಳಕೆ.
- ಯೋಜನೆಯ ತಾಂತ್ರಿಕತೆಗಳ ಕುರಿತು ವಿವಿಧ ಹಂತಗಳಲ್ಲಿ ವ್ಯಾಪಕ ತರಬೇತಿ.

- ರಾಜ್ಯದ ವಿವಿಧ ಕೃಷಿ ಪರಿಸರ ವಲಯಗಳಲ್ಲಿ ಹವಾಮಾನ ಬದಲಾವಣೆಯಿಂದ ಉಂಟಾಗುವ ಪರಿಣಾಮಗಳನ್ನು ಅರಿತು ಕೃಷಿ ಪದ್ಧತಿಗಳ ಯೋಗ್ಯತೆಯ ಮೌಲ್ಯಮಾಪನ ಕೈಗೊಳ್ಳುವುದು ಹಾಗೂ ಸೂಕ್ತ ಮಾರ್ಗೋಪಾಯಗಳನ್ನು ರೂಪಿಸುವುದು.
- ಬೀಜ ಗ್ರಾಮಗಳ, ಬೀಜ ಬ್ಯಾಂಕ್‌ಗಳ, ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರದ ಕೇಂದ್ರಗಳ ಸ್ಥಾಪನೆ ಮತ್ತು ಅತ್ಯವಶ್ಯ ಕೃಷಿ ಪರಿಕರಗಳ ಸೂಕ್ತ ಸಮಯದ ಸರಬರಾಜು ವ್ಯವಸ್ಥೆಗಳನ್ನು ಬಲಪಡಿಸುವುದು.

## ಹಿಂಗಾರು ಹಂಗಾಮಿನ ಯೋಜನಾ ಅನುಷ್ಠಾನ ಮಾರ್ಗಸೂಚಿ:

Å 2013 ï 14 ಸಾಲಿನಲ್ಲಿ 15 ಜಿಲ್ಲೆಗಳ 25.00 ಲಕ್ಷ ಹೆ. ಪ್ರದೇಶದ ಗುರಿ ನಿಗದಿಪಡಿಸಲಾಗಿದೆ. ಅನುಬಂಧ-1 ರಲ್ಲಿ ನೀಡಿರುವ ಜಿಲ್ಲಾವಾರು **ಬೆಳೆ ಮತ್ತು ವಿಸ್ತೀರ್ಣ**ದ ಗುರಿಗಳನ್ವಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು. **ಜಿಲ್ಲಾ ಭೂಚೇತನ ಪ್ರಗತಿಯನ್ನು ನೀಡುವಾಗ ಬಿತ್ತನೆ ಪ್ರಗತಿಯೊಂದಿಗೆ ಭೂಚೇತನ ಯೋಜನೆ ಅನುಷ್ಠಾನಗೊಂಡ ಪ್ರದೇಶದ ನಿಖರ ಮಾಹಿತಿಯನ್ನು ನೀಡುವುದು.**

1. ಬೆಳೆಯೋಜನಾ ಪ್ರದೇಶವು ಸಾಂದ್ರವಾಗಿ ಬರುವಂತೆ ಗ್ರಾಮಗಳನ್ನು ಆಯ್ಕೆ ಮಾಡುವುದು.
2. ಪ್ರತಿ 4 ರಿಂದ 5 ಗ್ರಾಮಗಳಿಗೆ ಒಂದು ಗ್ರಾಮವನ್ನು **ಗುಚ್ಛಗ್ರಾಮ**ವಾಗಿ ಆಯ್ಕೆ ಮಾಡುವುದು. ಯೋಜನಾ ಪ್ರದೇಶವನ್ನು ಆಯ್ಕೆ ಮಾಡುವಾಗ ಜಲಾನಯನ ಪ್ರದೇಶಕ್ಕೆ ಮೊದಲ ಆದ್ಯತೆ ನೀಡುವುದು. ಜಿಲ್ಲೆಯ ಜಲಾನಯನ ನಕ್ಷೆಗಳನ್ನು ಪಡೆದು ಅದರಲ್ಲಿ ಭೂಚೇತನ ಯೋಜನೆಯ ಪ್ರದೇಶವನ್ನು ಗುರುತಿಸುವುದು.
3. ಗ್ರಾಮ ಮಟ್ಟದಲ್ಲಿ ರೈತರಿಗೆ ತಾಂತ್ರಿಕ ಜ್ಞಾನ ಒದಗಿಸಲು **ರೈತ ಅನುವುಗಾರರ** (Farmer Facilitator) ಸೇವೆಯನ್ನು ಪಡೆಯುವುದು. **ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ತಮ್ಮ ಜಿಲ್ಲೆಗೆ ಅವಶ್ಯಕತೆಗಳಿಗೆ ಅನುಗುಣವಾಗಿ ಗರಿಷ್ಠ 500 ಹೆ.ಗೆ ಒಬ್ಬ ರೈತ ಅನುವುಗಾರರ ಸೇವೆಯನ್ನು ಪಡೆಯುವುದು.ಹಿಂಗಾರು ಹಂಗಮಿನಲ್ಲಿ ಕರ್ಯ ನಿರ್ವಹಿಸುವ ರೈತ ಅನುವುಗಾರರ ಸಂಖ್ಯೆ ಹಾಗೂ ವಿವರಗಳನ್ನು ಕೇಂದ್ರ ಕಛೇರಿಗೆ 15 ದಿನಗಳೊಳಗಾಗಿ ತಿಳಿಸುವುದು. ಪ್ರತಿ ದಿನಕ್ಕೆ ರೂ.175/-ರಂತೆ ಗೌರವಧನ ನೀಡುವುದು.** ರೈತ ಅನುವುಗಾರರಿಗೆ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರವರು ಗುರುತಿನ ಚೀಟಿಗಳನ್ನು ನೀಡುವುದು. ರೈತ ಅನುವುಗಾರರ ಸೇವೆಯನ್ನು ರೈತರ ನೋಂದಣಿ, ಬಿತ್ತನೆ ಸಮಯ, ಬೆಳೆ ಕೊಯ್ಲು ಇತ್ಯಾದಿ ಸಮಯಗಳಲ್ಲಿ ಹಂತ ಹಂತಗಳಲ್ಲಿ ಪಡೆಯುವುದು.

4. **ರೈತ ಅನುವುಗಾರರ ಕಾರ್ಯಾವಧಿ:** ಗ್ರಾಮ ಮಟ್ಟದಲ್ಲಿ ರೈತರಿಗೆ ತಾಂತ್ರಿಕ ಜ್ಞಾನ ಒದಗಿಸಲು ರೈತ ಅನುವುಗಾರರ (Farmer Facilitator) ಸೇವೆಯನ್ನು ಬೆಳೆ ಅವಧಿ ಆಧರಿಸಿ ಮುಂಗಾರು ಮತ್ತು ಹಿಂಗಾರು ಹಂಗಾಮು ಒಳಗೊಂಡಂತೆ ಗರಿಷ್ಠ 270 ದಿನಗಳಿಗೆ ರೈತ ಅನುವುಗಾರರ ಸೇವೆಯನ್ನು ಪಡೆಯುವುದು.

**ರೈತ ಅನುವುಗಾರರ ಆಯ್ಕೆ:** ರೈತ ಅನುವುಗಾರರನ್ನು ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿಗಳು ಆಯ್ಕೆ ಮಾಡಿ ಸಹಾಯಕ ಕೃಷಿ ನಿರ್ದೇಶಕರಿಂದ ಅನುಮೋದನೆ ಪಡೆಯುವುದು.

- ಸ್ಥಳೀಯ ರೈತರಾಗಿರಬೇಕು, **ಕೃಷಿ ಹಿನ್ನೆಲೆ ಹೊಂದಿರಬೇಕು.**
- **ರೈತ ಅನುವುಗಾರರು ಕನಿಷ್ಠ ಎಸ್.ಎಲ್.ಎಲ್.ಸಿ.ಉತ್ತೀರ್ಣರಾಗಿರಬೇಕು.**
- **ಕಂಪ್ಯೂಟರ್ ಜ್ಞಾನವನ್ನು ಹೊಂದಿರುವವರಿಗೆ ಆದ್ಯತೆ ನೀಡುವುದು.**
- **ರೈತ ಶಕ್ತಿ ಗುಂಪಿನ ಸದಸ್ಯರಿಗೆ ಆದ್ಯತೆ ನೀದುವುದು.**
- **ಕೃಷಿ ತರಬೇತಿಗಳನ್ನು ಪಡೆದವರಾಗಿರಬೇಕು** .
- **ಈಗಾಗಲೇ ಕಾರ್ಯ ನಿರ್ವಹಿಸಿರುವ ರೈತ ಅನುವುಗಾರರಿಗೆ ಆದ್ಯತೆ ಕೊಡಬೇಕು.**
- ಕೃಷಿ ಇಲಾಖೆಯಿಂದ ರಚಿಸಿರುವ ಗುಂಪುಗಳ ಸದಸ್ಯರಿಗೆ, **ರೈತ ಮಹಿಳೆಯರಿಗೆ** ಆದ್ಯತೆ ನೀಡುವುದು.
- ಆಯ್ಕೆ ಆದ ರೈತ ಅನುವುಗಾರರ ಹೆಸರು , ವಿಳಾಸ, ಸಂಪರ್ಕಸಂಖ್ಯೆಗಳ ವಿವರಗಳನ್ನು ಕೇಂದ್ರ ಕಛೇರಿಗೆ ಕಳುಹಿಸಿ ಕೊಡುವುದು.

5. ನಿಗದಿ ಪಡಿಸಿರುವ ನಮೂನೆಯಲ್ಲಿ (ಅನುಬಂಧ-2) ಆಯ್ಕೆಯಾದ ಗ್ರಾಮಗಳ ಎಲ್ಲಾ **ರೈತರ ನೊಂದಣಿ** ಮಾಡುವುದು. ನೊಂದಣಿ ಕಾರ್ಯವನ್ನು ಅಕ್ಟೋಬರ್ ಮೊದಲನೆ ವಾರ ಪೂರ್ಣಗೊಳಿಸುವುದು. ಮುಂಗಾರು ಹಂಗಾಮಿನ ರೈತರೇ ಹಿಂಗಾರು ಹಂಗಾಮಿಗೆ ಮುಂದುವರೆದಿದ್ದಲ್ಲಿ ಮುಂಗಾರು ಹಂಗಾಮಿನ ನೋಂದಣಿ ಅರ್ಜಿಯನ್ನು ಮುಂದುವರೆಸಿ ಹಿಂಗಾರು ಬೆಳೆ ಮಾಹಿತಿ ಪಡೆಯುವುದು.

6. .**ರೈತ ಕ್ಷೇತ್ರಪಾಠಶಾಲೆ:** ಉತ್ಪಾದನಾ ತಾಂತ್ರಿಕತೆಗಳನ್ನು ಯಶಸ್ವಿಯಾಗಿ ರೈತರಿಗೆ ತಲುಪಿಸಲು ಪ್ರತಿ ಅನುವುಗಾರರಿಗೆ ಒಂದು ರೈತ ಕ್ಷೇತ್ರ ಪಾಠಶಾಲೆಗಳನ್ನು ಅನುಷ್ಠಾನಗೊಳಿಸುವುದು. ಪ್ರತಿ ರೈತ ಕ್ಷೇತ್ರ ಪಾಠಶಾಲೆಯ ಘಟಕ ವೆಚ್ಚ ರೂ 10,000/-ಇದರಲ್ಲಿ ನಡೆಸುವ ಪ್ರಾತ್ಯಕ್ಷತೆಗಳಲ್ಲಿ ಹೊಸ ತಳಿಗಳಿಗೆ ಆದ್ಯತೆ ನೀಡುವುದು. ಘಟಕವಾರು ವಿವರವನ್ನು ಅನುಬಂಧ-03ರ ಲ್ಲಿ ನೀಡಲಾಗಿದೆ.ರೈತ ಕ್ಷೇತ್ರ ಪಾಠಶಾಲೆಗಳಿಗೆ ಬಳಸುವ ಪ್ರಾತ್ಯಕ್ಷತೆ ಪರಿಕರಗಳಿಗೆ ಜ.ಕೃ.ನಿ.ಯವರ ಅನುಮೋದನೆ ಪಡೆಯುವುದು.

7. **ತರಬೇತಿ/ಕಾರ್ಯಾಗಾರ**

**ಅ. <u>ಜಿಲ್ಲಾಮಟ್ಟ</u>**

1. ಜಿಲ್ಲಾಮಟ್ಟದಲ್ಲಿ ಸಮನ್ವಯ ಇಲಾಖೆ/ ಸಂಸ್ಥೆಗಳ ಜಿಲ್ಲಾ ಹಾಗೂ ತಾಲ್ಲೂಕಿನ ಅಧಿಕಾರಿಗಳು, ಕೃಷಿ ವಿಶ್ವವಿದ್ಯಾನಿಲಯದ ವಿಜ್ಞಾನಿಗಳಿಗೆ ಒಂದು ದಿನದ ಯೋಜನಾ ಕಾರ್ಯಾಗಾರ ಏರ್ಪಡಿಸುವುದು. ತರಬೇತಿ/ಕಾರ್ಯಾಗಾರವನ್ನು ದಿನವೊಂದಕ್ಕೆ ಗರಿಷ್ಠ ರೂ. 15,000/–ವೆಚ್ಚದಲ್ಲಿ ಏರ್ಪಡಿಸುವುದು.

**<u>ಘಟಕ ವಿವರ:</u>**

1) ದಿನ ಭತ್ಯೆ : @ ರೂ. 125/– ಪ್ರತಿ ಹಾಜರಾರ್ಥಿಗೆ.
2) ಕೃಷಿ ವಿಶ್ವವಿದ್ಯಾನಿಲಯ ವಿಜ್ಞಾನಿಗಳು/ ಪ್ರಗತಿ ಪರ ರೈತರು (4 ಸಂಪನ್ಮೂಲ ವ್ಯಕ್ತಿಗಳಿಗೆ) : ಗೌರವಧನ ಮತ್ತು ಪ್ರತಿ ವಿಷಯ ತಜ್ಞರಿಗೆ ರೂ.350/– ಮತ್ತು ವಾಸ್ತವಿಕ ಪ್ರಯಾಣ ವೆಚ್ಚ
3) ತರಬೇತಿ ಸಾಮಗ್ರಿ: 5000/– (ಲೇಖನಿ, ಪುಸ್ತಕ,ಸಭಾಂಗಣ ವ್ಯವಸ್ಥೆ,ಇತ್ಯಾದಿ).
4) ಇತರೆ ಪೂರಕ ವೆಚ್ಚ:2,000/–

**ಆ. ತಾಲ್ಲೂಕು ಮಟ್ಟ:**_ ತಾಲ್ಲೂಕಿನ ಸಮನ್ವಯ ಇಲಾಖೆ/ ಸಂಸ್ಥೆಗಳ ಅಧಿಕಾರಿಗಳು, ಕೃಷಿ ವಿಶ್ವವಿದ್ಯಾನಿಲಯ ತಜ್ಞರು, ಆಯ್ದ ರೈತ ಅನುವುಗಾರರಿಗೆ ಒಂದು ದಿನದ ತರಬೇತಿ/ಕಾರ್ಯಾಗಾರ ಏರ್ಪಡಿಸುವುದು. ತರಬೇತಿ/ಕಾರ್ಯಾಗಾರವನ್ನು ಗರಿಷ್ಠ ರೂ15,000/–ವೆಚ್ಚದಲ್ಲಿ ಏರ್ಪಡಿಸುವುದು.

**<u>ಘಟಕ ವಿವರ:</u>**

1. ದಿನ ಭತ್ಯೆ : @ ರೂ. 125/– ಪ್ರತಿ ಹಾಜರಾರ್ಥಿಗೆ.
2. ವಾಸ್ತವಿಕ ಪ್ರಯಾಣ ವೆಚ್ಚ: ಅಧಿಕಾರೇತರ ಹಾಜರಾರ್ಥಿಗಳಿಗೆ
3. ಕೃಷಿ ವಿಶ್ವವಿದ್ಯಾನಿಲಯ ವಿಜ್ಞಾನಿಗಳು / ಪ್ರಗತಿ ಪರ ರೈತರು (4 ಸಂಪನ್ಮೂಲ ವ್ಯಕ್ತಿಗಳಿಗೆ) : ಗೌರವಧನ ಪ್ರತಿ ವಿಷಯ ತಜ್ಞರಿಗೆ ರೂ.350/– ಮತ್ತು ವಾಸ್ತವಿಕ ಪ್ರಯಾಣ ವೆಚ್ಚ
4. ತರಬೇತಿ ಸಾಮಗ್ರಿ: 3000/–(ಲೇಖನಿ, ಪುಸ್ತಕ, ಸಭಾಂಗಣ ವ್ಯವಸ್ಥೆ, ಇತ್ಯಾದಿ).
5. ಇತರೆ ಪೂರಕ ವೆಚ್ಚ: 2,000/–

**<u>ಇ. ಹೋಬಳಿ ಮಟ್ಟ:</u>** ಹೋಬಳಿ ಮಟ್ಟದಲ್ಲಿ ಎಲ್ಲಾ ರೈತ ಅನುವುಗಾರರು, ಮುಂದಾಳು ರೈತರು ಹಾಗೂ ಪ್ರಗತಿಪರ ರೈತರಿಗೆ ತರಬೇತಿಯನ್ನು ಏರ್ಪಡಿಸುವುದು. (ಗರಿಷ್ಠ 100 ಅಭ್ಯರ್ಥಿಗಳು. ಪ್ರತಿ ತರಬೇತಿಗೆ ರೂ.10,000/– ಮಾತ್ರ.

**ಘಟಕ ವಿವರ:**

1. ಭೋಜನ ಮತ್ತು ರೈತರು/ರೈತ ಅನುವುಗಾರರಿಗೆ ವಾಸ್ತವಿಕ ಪ್ರಯಾಣ ವೆಚ್ಚ: ಗರಿಷ್ಠ ರೂ.5000/-
2. ಕೃಷಿ ವಿಶ್ವವಿದ್ಯಾನಿಲಯ ವಿಜ್ಞಾನಿಗಳು / ಪ್ರಗತಿ ಪರ ರೈತರು (4 ಸಂಪನ್ಮೂಲ ವ್ಯಕ್ತಿಗಳಿಗೆ) : ಪ್ರತಿ ವಿಷಯ ತಜ್ಞರಿಗೆ ರೂ.350/- ಗೌರವಧನ ಮತ್ತು ಮತ್ತು ವಾಸ್ತವಿಕ ಪ್ರಯಾಣ ವೆಚ್ಚ
3. ತರಬೇತಿ ಸಾಮಗ್ರಿ: 2,000/- (ಲೇಖನಿ, ಪುಸ್ತಕ, ಸಭಾಂಗಣ ವ್ಯವಸ್ಥೆ, ಇತ್ಯಾದಿ).
4. ಇತರೆ ಪೂರಕ ವೆಚ್ಚ: 1,000/-

**ಈ. ಗುಚ್ಛ ಗ್ರಾಮಗಳಲ್ಲಿ ರೈತರಿಗೆ ಮಾಹಿತಿ ಸಭೆ:** ಗುಚ್ಛ ಗ್ರಾಮದಲ್ಲಿ ರೈತರಿಗೆ ಮಾಹಿತಿ ಸಭೆಗಳನ್ನು ಏರ್ಪಡಿಸುವದು .ಈ ತರಬೇತಿಯಲ್ಲಿ ಎಲ್ಲಾ ರೈತ ಅನುವುಗಾರರು ,ಎಲ್ಲಾ ಸ್ಥಳೀಯ ಸಕ್ರಿಯ ಸ್ವಸಹಾಯ ಸಂಘಗಳು ಹಾಗೂ ಪ್ರಗತಿಪರ ರೈತರನ್ನು ಆಹ್ವಾನಿಸುವುದು. ಈ ಸಭೆಗೆ ಸ್ಥಳೀಯ ವೆಚ್ಚಗಳಿಗಾಗಿ ಪ್ರತಿ ಸಭೆಗೆ ರೂ.2000/- ಮೀರದಂತೆ ವೆಚ್ಚ ಭರಿಸುವುದು.

**ಉ. ರೈತ ಅನುವುಗಾರರರಿಗೆ ಸಾಂಸ್ಥಿಕ ತರಬೇತಿ:** *ಆಯ್ಕೆಯಾಗಿರುವ ಹೊಸ ರೈತ ಅನುವುಗಾರರಿಗೆ ಮಾತ್ರ ಕಡ್ಡಾಯವಾಗಿ ಐದು ದಿನಗಳ ಸಾಂಸ್ಥಿಕ ಬುನಾದಿ ತರಬೇತಿಯನ್ನು ಜಿಲ್ಲಾ ಕೃಷಿ ತರಬೇತಿ ಕೇಂದ್ರ/ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ನೀಡುವುದು. ಮುಂಗಾರು ಹಂಗಾಮಿನಲ್ಲಿ ಮುಂದುವರೆದ ರೈತ ಅನುವುಗಾರರಿಗೆ ಮೂರು ದಿನದ ಪುನ:ಶ್ಚೇತನ ಸಾಸ್ಥಿಕ ತರಬೇತಿ ನೀಡುವುದು.* ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಸಂಬಂಧಿಸಿದ ಕೃಷಿ ವಿಶ್ವ ವಿದ್ಯಾನಿಲಯಗಳ ವಿಸ್ತರಣಾ ನಿರ್ದೇಶಕರೊಡನೆ ಚರ್ಚಿಸಿ, ಅಕ್ಟೋಬರ್ ಎರಡನೆ ಪಕ್ಷಿಕದೊಳಗೆ ತರಬೇತಿಗಳನ್ನು ಕಡ್ಡಾಯವಾಗಿ ಪೂರ್ಣಗೊಳಿಸುವುದು.

ರೈತ ಅನುವುಗಾರರ ತರಬೇತಿಯಲ್ಲಿ ಅಳವಡಿಸಿಕೊಳ್ಳಬೇಕಾದ ಪಠ್ಯಕ್ರಮ ಈ ಕೆಳಗಿನಂತಿರುತ್ತದೆ.

- ಭೂಚೇತನ-ಯೋಜನೆಯ ಉದ್ದೇಶ
- ಜಿಲ್ಲೆಯ ಬೆಳೆವಾರು ಗುರಿ ವಿವರ
- ಮಣ್ಣು ಪರೀಕ್ಷೆ ಆಧಾರಿತ ಮಣ್ಣು ಮಾದರಿಗಳ ಬೆಳೆವಾರು ಪೋಷಕಾಂಶಗಳ ಶಿಫಾರಸ್ಸು
- ರೈತರ ನೊಂದಣಿ
- ರೈತ ಅನುವುಗಾರರ ಕರ್ತವ್ಯಗಳು ಹಾಗೂ ಜವಾಬ್ದಾರಿಗಳು.

- ಭೂಚೇತನ ಯೋಜನೆಯಲ್ಲಿ ತಾಂತ್ರಿಕತೆಗಳು
    - ➢ ಮಣ್ಣು ಮತ್ತು ನೀರು ನಿರ್ವಹಣೆಯ ಪದ್ದತಿ
    - ➢ ಪೋಷಕಾಂಶಗಳ ನಿರ್ವಹಣೆ & ಬೆಳೆವಾರು ಶಿಫಾರಸ್ಸು
    - ➢ ಹೊಸ ತಳಿಗಳ ಮಾಹಿತಿ ಮತ್ತು ಬೀಜೋತ್ಪಾದನೆ.
    - ➢ ಸಮಗ್ರ ಪೀಡೆ ಮತ್ತು ರೋಗ ನಿರ್ವಹಣೆ
    - ➢ ರೈತ ಕ್ಷೇತ್ರ ಪಾಠಶಾಲೆ.
    - ➢ ಖುಷ್ಕಿ ಬೇಸಾಯದಲ್ಲಿ ಉತ್ಪಾದನೆಯನ್ನು ಹೆಚ್ಚಿಸಲು ಅನುಸರಿಸಬೇಕಾದ ಬೇಸಾಯ ಪದ್ಧತಿಗಳು.
    - ➢ ಇಲಾಖೆಯ ವಿವಿಧ ಯೋಜನೆಗಳ ಅನುಷ್ಠಾನ ಕುರಿತು ಮಾಹಿತಿಗಳು.
    - ➢ ವೈಜ್ಞಾನಿಕ ರೀತಿಯಲ್ಲಿ ಬೆಳೆ ಕಟಾವು ಮಾಡುವ ಕುರಿತು ಬೆಳೆ ಕಟಾವು ಪ್ರಯೋಗಗಳ ವಿಧಾನಗಳು.

- **<u>ತರಬೇತಿ ಘಟಕ ವಿವರಗಳು:</u>**

| ಕ್ರ.ಸಂ | ವಿವರ |
|---|---|
| 1 | ಬೋರ್ಡಿಂಗ್ ವೆಚ್ಚ @ ಒಬ್ಬರಿಗೆ ಒಂದು ದಿನಕ್ಕೆ ರೂ. 150/– |
| 2 | ವಾಸ್ತವ್ಯ ವೆಚ್ಚ ಇರುವಲ್ಲಿ ಒಬ್ಬರಿಗೆ ಒಂದು ದಿನಕ್ಕೆ ರೂ.50/– |
| 3 | ರೈತ ಅನುವುಗಾರರಿಗೆ ವಾಸ್ತವಿಕ ಪ್ರಯಾಣ ವೆಚ್ಚ |
| 4 | ತರಬೇತಿ ಸಾಮಾಗ್ರಿ ವೆಚ್ಚ @ ಒಬ್ಬರಿಗೆ ರೂ.100/–ರಂತೆ |
| 4 | ಗೌರವಧನ ಸಂಪನ್ಮೂಲ ವ್ಯಕ್ತಿಗಳಿಗೆ – ಪ್ರತಿ ಸಂಪನ್ಮೂಲ ವ್ಯಕ್ತಿಗೆ ರೂ 350/– ರಂತೆ |
| 5 | ಇತರೆ ವೆಚ್ಚ (ಪ್ರಮಾಣ ಪತ್ರ ಮತ್ತು ಇತರೆ)– ಒಂದು ತರಬೇತಿಗೆ– ರೂ. 5,000/– |

- ತರಬೇತಿ ಅವಧಿಯಲ್ಲಿ ರೈತ ಅನುವುಗಾರರಿಗೆ ತರಬೇತಿ ವೆಚ್ಚ ಹೊರತುಪಡಿಸಿ ದಿನವೊಂದಕ್ಕೆ ರೂ. 150/– ಗೌರವಧನ ನೀಡಲು ಅವಕಾಶವಿದ್ದು, ಸದರಿ ವೆಚ್ಚವನ್ನು ತರಬೇತಿ ಪೂರ್ಣಗೊಳಿಸಿದ ನಂತರ ರೈತ ಅನುವುಗಾರರನಿಗೆ ಕೆಲಸದ ದಿನಗಳೆಂದು ಪರಿಗಣಿಸಿ ನೀಡುವ ಅನುದಾನದಲ್ಲಿ ಭರಿಸುವುದು.
- ಎಲ್ಲಾ ತರಬೇತಿಗಳ ವೆಚ್ಚವನ್ನು ಕೃಷಿ ಉತ್ಸವ, ಆತ್ಮ, ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳ ಯೋಜನೆಯಡಿಯ ಅನುದಾನದಲ್ಲಿ ಭರಿಸಿ, ಹೆಚ್ಚುವರಿ ವೆಚ್ಚವನ್ನು ಭೂಚೇತನ ಯೋಜನೆಯ ಪ್ರಚಾರ ಮತ್ತು ತರಬೇತಿ ಘಟಕದಡಿ ಭರಿಸುವುದು.

* <u>**ಸಮೂಹ ಆಧಾರಿತ ಚಟುವಟಿಕೆಗಳು:**</u> ಭೂಚೇತನ ಯೋಜನೆಯಡಿಯ ರೈತರನ್ನು ಸಂಘಟಿತರನ್ನಾಗಿರಿಸಲು ಸಾಮೂಹಿಕ ಬೀಜೋಪಚಾರ, ಬಿತ್ತನೆ ಕಾರ್ಯ, ಸಸ್ಯ ಸಂರಕ್ಷಣಾ ಕ್ರಮಗಳು, ಸಂಘಟಿತ ಮಾರುಕಟ್ಟೆ ವ್ಯವಸ್ಥೆಗಳಿಗೆ ಉತ್ತೇಜನ ನೀಡುವುದು.

**8. ಪ್ರಚಾರ:**

* ಯೋಜನೆಯ ಬಗ್ಗೆ ರೈತರಿಗೆ ಅರಿವು ಮೂಡಿಸಲು ಪ್ರತಿ ಹಳ್ಳಿಯಲ್ಲೂ ಡಂಗುರ ಹೊಡಿಸುವುದು.
* ಭಿತ್ತಿ ಪತ್ರಿಕೆಗಳು, ಕರಪತ್ರಗಳು, ದಿನಪತ್ರಿಕೆಗಳಲ್ಲಿ ಪ್ರಕಟಣೆ, ದೂರದರ್ಶನ ಕಾರ್ಯಕ್ರಮ.
* ಗ್ರಾಮ ಸಭೆಗಳ ಮುಖಾಂತರ ಪ್ರಚಾರ ಮಾಡುವುದು. ಅಳವಡಿಸಬೇಕಾದ ಖುಷ್ಕಿ ಬೇಸಾಯ ತಾಂತ್ರಿಕತೆಗಳ ಬಗ್ಗೆ ಅರಿವು ಮೂಡಿಸಲು **ಗೋಡೆಬರಹ**ಗಳನ್ನು ಬರೆಸುವುದು. ಒಂದು ಗೋಡೆ ಬರಹ ಕನಿಷ್ಠ 80 ಚದರ ಅಡಿಯ ವಿಸ್ತೀರ್ಣವಿರತಕ್ಕದ್ದು. ಒಂದು ಗೋಡೆ ಬರಹಕ್ಕೆ ರೂ.2000/- . ಹೊಸ ಮತ್ತು ಆಕರ್ಷಕ ನುಡಿಗಟ್ಟುಗಳು, ಸ್ಥಳಿಯ ಬೆಳೆ ಪದ್ಧತಿ ಮತ್ತು ತಾಂತ್ರಿಕತೆ , ಫಲವತ್ತತೆ ನಕ್ಷೆ & ವಿವರಗಳನ್ನು ಒಳಗೊಂಡ ಮಾಹಿತಿಯನ್ನು ಬರೆಯತಕ್ಕದ್ದು. ಇವುಗಳನ್ನು ಗೋಡೆಗಳಲ್ಲದೆ ರೈತರ ಟ್ರ್ಯಾಕ್ಟರ್ ಹಾಗೂ ಕೃಷಿಯಂತ್ರೋಪಕರಣಗಳ ಮೇಲೆ ಬರೆಯಬಹುದು.

**೯. ಕ್ಷೇತ್ರೋತ್ಸವ:**

ಅ. ಪ್ರತಿ ಹೋಬಳಿ ಮಟ್ಟದಲ್ಲಿ ಒಂದು ಕ್ಷೇತ್ರೋತ್ಸವ ಆಯೋಜಿಸುವುದು. ಸದರಿ ಘಟಕಕ್ಕೆ ಗರಿಷ್ಠ ರೂ.5000/- ಮೀರದಂತೆ ಈಗಾಗಲೇ ಅನುಷ್ಠಾನಗೊಳಿಸಲಾಗುತ್ತಿರುವ ಭೂಚೇತನ ಯೋಜನೆಯಡಿಯ ರೈತ ಕ್ಷೇತ್ರ ಪಾಠಶಾಲೆ ಘಟಕದಡಿ ಕ್ಷೇತ್ರೋತ್ಸವಕ್ಕೆ ಲಭ್ಯವಿರುವ ಅನುದಾನದಲ್ಲಿ ವೆಚ್ಚ ಭರಿಸುವುದು.

ಆ. ಪ್ರತಿ ತಾಲ್ಲೂಕು ಮಟ್ಟದಲ್ಲಿ ಒಂದು ಕ್ಷೇತ್ರೋತ್ಸವ ಆಯೋಜಿಸುವುದು. ಸದರಿ ಘಟಕಕ್ಕೆ ಗರಿಷ್ಠ ರೂ.25,000/- ಮೀರದಂತೆ ಭೂಚೇತನ ಯೋಜನೆಯ ಪ್ರಚಾರ ಮತ್ತು ತರಬೇತಿ ಘಟಕದಡಿ ವೆಚ್ಚ ಭರಿಸುವುದು.

ಇ. ಯಶೋಗಾಥೆಗಳನ್ನು ಅಭಿವೃದ್ಧಿಪಡಿಸುವುದು.

**10. ಭೂಫಲವತ್ತತೆ ಹಾಗೂ ಪೋಷಕಾಂಶ ಶಿಫಾರಸ್ಸು: ಗ್ರಾಮ ಪಂಚಾಯತಿ ಮಟ್ಟದಲ್ಲಿ ಮಣ್ಣು ಫಲವತ್ತತೆ ನಕ್ಷೆಗಳನ್ನು ಬರೆಸುವುದು.**ಭೂಚೇತನ ಯೋಜನಾ ವ್ಯಾಪ್ತಿಯ ಎಲ್ಲಾ ರೈತರಿಗೆ ವ್ಯಾಪಕ ಪ್ರಚಾರಕ್ಕಾಗಿ ತಾಲ್ಲೂಕಿನ ಸಾಮಾನ್ಯ ಫಲವತ್ತತೆ ಮಾಹಿತಿ ಹಾಗೂ ಮುಖ್ಯ ಬೆಳೆಗಳಿಗೆ ಪೋಷಕಾಂಶಗಳ ಶಿಫಾರಸ್ಸನ್ನು ಒಳಗೊಂಡ

ಕರಪತ್ರಗಳನ್ನು ನೀಡುವುದು. ಸದರಿ ವೆಚ್ಚವನ್ನು ಭೂಚೇತನ ಯೋಜನೆಯ ಪ್ರಚಾರ ಮತ್ತು ತರಬೇತಿ ಘಟಕದಡಿ ಭರಿಸುವುದು.

**11. ಪರಿಕರಗಳ ದಾಸ್ತಾನು ಹಾಗೂ ವಿತರಣೆ:**

- ವಿವಿಧ ಚಾಲ್ತಿ ಯೋಜನೆಗಳಡಿಯಲ್ಲಿನ ಬಿತ್ತನೆ ಬೀಜ, ಲಘು ಪೋಷಕಾಂಶಗಳು, ಜೈವಿಕ ಗೊಬ್ಬರಗಳು, ಸಸ್ಯ ಸಂರಕ್ಷಣಾ ರಾಸಾಯನಿಕಗಳು ಹಾಗೂ ಇತರೆ ಪರಿಕರಗಳನ್ನು ಸಮಗ್ರಗೊಳಿಸಿ ರೈತರಿಗೆ ರಿಯಾಯಿತಿಯಲ್ಲಿ ಪೂರೈಸುವುದು.
- ಎಲ್ಲಾ ಪರಿಕರಗಳಿಗೆ ಇಲಾಖೆಯ ಯೋಜನೆಗಳಲ್ಲಿ ಹಣವನ್ನು ಮಾರ್ಗಸೂಚಿಯನ್ವಯ ಉಪಯೋಗಿಸಿಕೊಳ್ಳುವುದು. ಯಾವುದೇ ರಿಯಾಯಿತಿಯನ್ನು ಹಾಲಿ ಇರುವ ಕೃಷಿ ಇಲಾಖೆಯ ಯೋಜನೆ ಮಾರ್ಗಸೂಚಿಯನ್ವಯವೇ ಭರಿಸತಕ್ಕದ್ದು.
- ಯೋಜನೆ ಅನುಷ್ಠಾನಕ್ಕಾಗಿ ಅವಶ್ಯವಿರುವ ಕೃಷಿ ಪರಿಕರಗಳಾದ ಬಿತ್ತನೆ ಬೀಜ, ರಸಗೊಬ್ಬರ, ಜೈವಿಕ ಗೊಬ್ಬರ, ಲಘು ಪೋಷಕಾಂಶಗಳನ್ನು ಅವಶ್ಯಕತೆಗನುಗುಣವಾಗಿ ಬೇಡಿಕೆ ಸಲ್ಲಿಸಿ ದಾಸ್ತಾನು ಮಾಡುವುದು.
- **ಸಸ್ಯ ಸಂರಕ್ಷಣಾ ಔಷಧಿಗಳನ್ನು ಬೆಳೆಗಳ ಕೀಟ ಹಾಗೂ ರೋಗಬಾಧೆ ಆಧರಿಸಿ, ಇಲಾಖೆಯ ಇತರೆ ಯೋಜನೆಗಳಲ್ಲಿ ಅನುದಾನಕ್ಕೆ ಕೊರತೆಯಾದಲ್ಲಿ ಮಾತ್ರವೇ ಕೇಂದ್ರ ಕಛೇರಿಯ ಅನುಮತಿಯನ್ನು ಪಡೆದು ಭೂಚೇತನ ಯೋಜನೆಯಡಿ ಬೇಡಿಕೆ ಸಲ್ಲಿಸುವುದು.**
- **ಜೈವಿಕ ಗೊಬ್ಬರ ಹಾಗೂ ಜೈವಿಕ ಪೀಡೆನಾಶಕಗಳಿಗೆ ಭೂಚೇತನ ಯೋಜನೆಯಡಿ ಬೇಡಿಕೆ ಸಲ್ಲಿಸುವಾಗ ಕೇಂದ್ರ ಕಛೇರಿಯ ಪೂರ್ವಾನುಮತಿ ಪಡೆಯುವುದು.**
- **ಭೂಚೇತನ ಯೋಜನೆಯಡಿ ರೈತರಿಗೆ ವಿತರಿಸುವ ಎಲ್ಲಾ ಪರಿಕರಗಳ ಸ್ವೀಕೃತಿ ಮತ್ತು ವಿತರಣೆ ಮಾಹಿತಿಯನ್ನು ಪರಿಕರವಾರು ವ್ಯವಸ್ಥಿತವಾಗಿ ನಿರ್ವಹಿಸಲು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಮತ್ತು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಸೂಕ್ತ ಕ್ರಮ ಕೈಗೊಳ್ಳುವುದು.**
- **ಗುಚ್ಛ ಗ್ರಾಮ ಮಟ್ಟದಲ್ಲಿ** ಕೃಷಿ ಪರಿಕರಗಳನ್ನು ದಾಸ್ತಾನು ಮಾಡಿ ರೈತರಿಗೆ ವಿತರಿಸುವುದು. ಗುಚ್ಛ ಗ್ರಾಮದಲ್ಲಿ ಪರಿಕರಗಳನ್ನು ದಾಸ್ತಾನು ಮಾಡಲು ಮಾಹೆಯಾನ ಗರಿಷ್ಟ ರೂ 1000ರಂತೆ ಹಂಗಾಮಿಗೆ ಗರಿಷ್ಠ ಆರು ತಿಂಗಳಿನಂತೆ ಹಿಂಗಾರು ಗೋದಾಮನ್ನು ಬಾಡಿಗೆಗೆ ಪಡೆಯುವುದು.

**13. ಪರಿಕರಗಳನ್ನು ಸಾಗಿಸಲು ವಾಹನ ಸೌಲಭ್ಯ:** ರೈತ ಸಂಪರ್ಕ ಕೇಂದ್ರಗಳಿಂದ ಗುಚ್ಛ ಗ್ರಾಮಗಳಿಗೆ ಪರಿಕರಗಳನ್ನು ಸಾಗಾಣಿಕೆ ಮಾಡಲು ಪ್ರತಿ ರೈತ ಸಂಪರ್ಕ ಕೇಂದ್ರಕ್ಕೆ ಒಂದು ಹಂಗಾಮಿಗೆ ಗರಿಷ್ಟ 10,000/- ವೆಚ್ಚ ಭರಿಸಬಹುದಾಗಿರುತ್ತದೆ.

14. **ಬೆಳೆ ಕಟಾವು ಮತ್ತು ದಾಖಲಾತಿಗಳು :**

**1.** ICRISAT ಸಂಸ್ಥೆಯ ಮಾರ್ಗಸೂಚಿಯನ್ವಯ ಬೆಳೆ ಕಟಾವು ಪ್ರಯೋಗಗಳನ್ನು ICRISAT ಸಂಸ್ಥೆ ಹಾಗೂ ಕೃಷಿ ವಿಶ್ವವಿದ್ಯಾನಿಲಯಗಳ ಸಹಯೋಗದೊಂದಿಗೆ

ಕೈಗೊಳ್ಳುವುದು.

**2. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಸಹಯೋಗದೊಂದಿಗೆ ಕೈಗೊಳ್ಳುವುದು:**

- ✓ ಭೂಚೇತನ ಯೋಜನೆ ಅನುಷ್ಟಾನಗೊಳ್ಳುತ್ತಿರುವ ಗ್ರಾಮ ಮತ್ತು ಬೆಳೆ ಹಾಗೂ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಿಂದ ಬೆಳೆ ಕಟಾವು ಪ್ರಯೋಗಗಳನ್ನು ಕೈಗೊಳ್ಳುವ ಗ್ರಾಮ ಮತ್ತು ಬೆಳೆ ತಾಳೆಯಾದಲ್ಲಿ ಅಂತಹ ಗ್ರಾಮ ಮತ್ತು ಬೆಳೆಗಳಲ್ಲಿ ಬೆಳೆ ಕಟಾವು ಪ್ರಯೋಗಗಳನ್ನು ಕೈಗೊಳ್ಳಲು ಸಾಂಖ್ಯಿಕ ನಿರ್ದೇಶನಾಲಯದ ಮೂಲ ಕಾರ್ಯಕರ್ತರೊಂದಿಗೆ ಕೆಲಸ ನಿರ್ವಹಿಸಲು ಸಹ-ಕಾರ್ಯಕರ್ತರಾಗಿ ರೈತ ಅನುವುಗಾರರನ್ನು ನಿಯೋಜಿಸಿವುದು.
- ✓ ಈ ಕುರಿತು ಜಿಲ್ಲಾಮಟ್ಟದಲ್ಲಿ ಸಾಂಖ್ಯಿಕ ಇಲಾಖೆಯ ಅಧಿಕಾರಿಗಳನ್ನೊಳಗೊಂಡ ಸಭೆ ಕರೆದು, ತಾಳೆಯಾಗುವ ಗ್ರಾಮ ಮತ್ತು ಬೆಳೆಗಳನ್ನು ಗುರುತಿಸುವುದು ಮತ್ತು ಬೆಳೆ ಕಟಾವು ಪ್ರಯೋಗಗಳನ್ನು ಕೈಗೊಳ್ಳಲು ರೈತ ಅನುವುಗಾರರಿಗೆ ಸೂಕ್ತ ತರಬೇತಿಯನ್ನು ನೀಡಲು ಸೂಕ್ತ ಕ್ರಮಕೈಗೊಳ್ಳವುದು.

**ಯೋಜನೆ ಅನುಷ್ಠಾನ ಅಧಿಕಾರಿಗಳ ಕರ್ತವ್ಯಗಳು ಹಾಗೂ ಜವಾಬ್ದಾರಿಗಳು.**

1. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು/ ಜಲಾನಯನ ಅಭಿವೃದ್ಧಿ ಅಧಿಕಾರಿಗಳು :
ಜಿಲ್ಲಾ ಕ್ರಿಯಾಯೋಜನೆ ರೂಪಿಸುವುದು, ಇತರೆ ಇಲಾಖೆಗಳೊಂದಿಗೆ ಸಮನ್ವಯ, ಮಾರ್ಗದರ್ಶನ ಮತ್ತು ಮೇಲ್ವಿಚಾರಣೆ, ಪ್ರಚಾರ ಮತ್ತು ಮಾಹಿತಿ ಸಂಗ್ರಹಣೆ, ಪರಿಶೀಲನೆ ಮತ್ತು ಕ್ರೋಢೀಕರಣೆ, ಅಳವಡಿಸಿಕೊಳ್ಳಬೇಕಾಗಿರುವ ತಾಂತ್ರಿಕತೆಗಳನ್ನು ನಿರ್ಧರಿಸುವುದು,ನಿಯತಕಾಲಿಕ ಪರಿಶೀಲನೆ ಹಾಗೂ ವರದಿ ಮಾಡುವುದು, ಪರಿಕರಗಳನ್ನು ಸಜ್ಜುಗೊಳಿಸುವುದು ಹಾಗೂ ಅವಶ್ಯ ಅನುದಾನವನ್ನು ಕ್ರೋಢೀಕರಿಸುವುದು.
2. ಕೇಂದ್ರ ಕಛೇರಿಯ ಮಾರ್ಗದರ್ಶಕ ಅಧಿಕಾರಿಗಳು: ಯೋಜನಾ ಅನುಷ್ಠಾನ ಉಸ್ತುವಾರಿ, ಸಮರ್ಪಕ ಅನುದಾನ ಬಳಕೆ ಉಸ್ತುವಾರಿ, ಪರಿಕರಗಳ ದಾಸ್ತಾನು ಹಾಗೂ ದಾಖಲಾತಿ ನಿರ್ವಹಣೆ ಉಸ್ತುವಾರಿ, ಜಿಲ್ಲಾ ಕಚೇರಿಯೊಂದಿಗೆ ಸಮನ್ವಯ.
3. ತಾಲ್ಲೂಕು ಮಾರ್ಗದರ್ಶಕ ಅಧಿಕಾರಿಗಳು: ಉ.ಕೃ.ನಿ., ಜಿ.ಕೃ.ತ.ಕೇ., ಸ.ಕೃ.ನಿ (ವಿತ) ರವರು ತಾಲ್ಲೂಕು ಸ.ಕೃ.ನಿ. ರವರಿಗೆ ಸಮನ್ವಯಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುವುದು ಮತ್ತು ಯೋಜನಾ ಅನುಷ್ಠಾನದ ಮಾರ್ಗದರ್ಶನ, ಉಸ್ತುವಾರಿ ಹಾಗೂ ವರದಿ ಇವರ ಮುಖ್ಯ ಕರ್ತವ್ಯವಾಗಿರುತ್ತವೆ.

4. ತಾಲ್ಲೂಕು ಸ.ಕೃನಿ– ಯೋಜನಾ ಅನುಷ್ಠಾನದ ಮುಖ್ಯಸ್ಥ: ತಾಲ್ಲೂಕಿನ ವಿವಿಧ ಇಲಾಖೆಗಳು ಹಾಗೂ ಕೃಷಿ ವಿಜ್ಞಾನ ಕೇಂದ್ರಗಳೊಂದಿಗೆ ಸಮನ್ವಯ, ಆಯ್ಕೆ ಮಾಡಿದ ಹಳ್ಳಿಗಳ ಪರಿಶೀಲನೆ, ಪರಿಕರಗಳ ವ್ಯವಸ್ಥೆ, ಕ್ರಿಯಾ ಯೋಜನೆ ತಯಾರಿಸುವುದು (ತರಬೇತಿ ದಿನಾಂಕಗಳು, ವಿವಿಧ ಚಟುವಟಿಕೆಗಳ ವೇಳಾಪಟ್ಟಿ ಮುಂತಾದವು), ಯೋಜನಾ ಅನುಷ್ಠಾನಕ್ಕೆ ಸಿಬ್ಬಂದಿಯ ಆಯ್ಕೆ. ಪ್ರಚಾರ, ದಾಖಲಾತಿ ಹಾಗೂ ಉಸ್ತುವಾರಿ, ಅನುದಾನ ಹಂಚಿಕೆ, ರೈತ ಅನುವುಗಾರರ ಆಯ್ಕೆ ಮತ್ತು ಅನುಮೋದನೆ, ರೈತ ಅನುವುಗಾರರ ಕಾರ್ಯ ಪರಿಶೀಲನೆ, ರೈತ ಕ್ಷೇತ್ರ ಪಾಠಶಾಲೆ ಅನುಷ್ಠಾನ ಉಸ್ತುವಾರಿ, ಸಿಬ್ಬಂದಿಗೆ ಯೋಜನಾ ಅನುಷ್ಠಾನದ ಕ್ಷೇತ್ರ ಹಂಚಿಕೆ, ಕ್ಷೇತ್ರ ಭೇಟಿಗಳನ್ನು ಆಯೋಜಿಸುವುದು.

5. ಕೃಷಿ ಅಧಿಕಾರಿ (ರೈ.ಸಂ.ಕೇ): ರೈತ ಸಂಪರ್ಕ ಕೇಂದ್ರದ ಕ್ರಿಯಾ ಯೋಜನೆ ತಯಾರಿಕೆ, ರೈತ ಸಂಪರ್ಕ ಕೇಂದ್ರದಿಂದ ಹಳ್ಳಿಗಳಿಗೆ ಪರಿಕರಗಳ ಪೂರೈಕೆಗೆ ವ್ಯವಸ್ಥೆ ಮಾಡುವುದು, ಸಮೀಕ್ಷೆಯ ಉಸ್ತುವಾರಿ, ತಿಳಿಯಪಡಿಸುವಿಕೆ, ದಾಖಲಾತಿ, ಗೋಡೆ ಬರಹದ ಮಾಹಿತಿಯನ್ನು ಸ.ಕೃ.ನಿ. ಯವರೊಂದಿಗೆ ಸೇರಿ ತಯಾರಿಸುವುದು, ಹೋಬಳಿ ವ್ಯಾಪ್ತಿಯಲ್ಲಿ ಪ್ರಚಾರ, ಬೆಳೆ ಸಮೀಕ್ಷೆ ಕೈಗೊಳ್ಳುವುದು ಹಾಗೂ ಸ.ಕೃನಿ. ಯವರಿಗೆ ವರದಿ ಮಾಡುವುದು, ಕ್ಷೇತ್ರೋತ್ಸವ ಹಾಗೂ ಕ್ಷೇತ್ರ ಭೇಟಿಗಳನ್ನು ಏರ್ಪಡಿಸುವುದು, ರೈತ ಸಂಪರ್ಕ ಕೇಂದ್ರ ಮಟ್ಟದಲ್ಲಿ ತರಬೇತಿಗಳನ್ನು ಆಯೋಜಿಸುವುದು, ತಾಂತ್ರಿಕ ಅಡಚಣೆಗಳನ್ನು ಗುರುತಿಸುವುದು, ರೈತರ ದಾಖಲಾತಿ, ಆಯವ್ಯಯ ತುಲನೆ ಮಾಡುವುದು, ಸಾಲ ಸೌಲಭ್ಯಕ್ಕೆ ವಿವಿಧ ಸಂಸ್ಥೆಗಳೊಂದಿಗೆ ಸಮನ್ವಯ, ರೈತ ಕ್ಷೇತ್ರ ಪಾಠಶಾಲೆ ಅನುಷ್ಠಾನ ಉಸ್ತುವಾರಿ, ಬೆಳೆ ಕಟಾವು ಪ್ರಯೋಗಗಳ ಉಸ್ತುವಾರಿ, ರೈತ ಅನುವುಗಾರರ ಸಾಪ್ತಾಹಿಕ ಪ್ರಗತಿ ಪರಿಶೀಲನೆ ಮಾಡಿ ಸಹಾಯಕ ಕೃಷಿ ನಿರ್ದೇಶಕರಿಗೆ ವರದಿ ಸಲ್ಲಿಸುವುದು.

6. ಸಹಾಯಕ ಕೃಷಿ ಅಧಿಕಾರಿ/ ಕೃಷಿ ಸಹಾಯಕ: ಯೋಜನಾ ಅನುಷ್ಠಾನದ ಕ್ಷೇತ್ರ ಹಾಗೂ ರೈತರ ಆಯ್ಕೆ, ರೈತರಿಗೆ ಮಾಹಿತಿ ನೀಡುವುದು, ಪ್ರಾಥಮಿಕ ಸಮೀಕ್ಷೆ, ಬೀಜದಿಂದ ಮಾರುಕಟ್ಟೆಯವರೆಗಿನ ಆಗು ಹೋಗುಗಳ ಬಗ್ಗೆ ಗಮನ ಹರಿಸುವುದು, ಹಳ್ಳಿಯಲ್ಲಿ ಪರಿಕರಗಳ ದಾಸ್ತಾನು ಮಾಡಲು ಸ್ಥಳ ಗುರುತಿಸುವುದು, ರೈತ ಅನುವುಗಾರರನ್ನು ಗುರುತಿಸುವುದು, ಹಳ್ಳಿ ಮಟ್ಟದ ಪರಿಕರಗಳ ಬೇಡಿಕೆ ಅಂದಾಜು ಮಾಡುವುದು, ರೈತರು ಹಾಗೂ ರೈತ ಅನುವುಗಾರರಿಗೆ ಪರಿಚಯಾತ್ಮಕ ತರಬೇತಿ, ರೈತ ಕ್ಷೇತ್ರ ಪಾಠಶಾಲೆ ಅನುಷ್ಠಾನ ಉಸ್ತುವಾರಿ, ಬೆಳೆ ಕಟಾವು ಪ್ರಯೋಗಗಳನ್ನು ಮಾಡುವುದು.

7. ರೈತ ಅನುವುಗಾರರು: ರೈತರು ಹಾಗೂ ವಿಸ್ತರಣಾ ಸಿಬ್ಬಂದಿಗೆ ಸಂಪರ್ಕ ಸೇತುವೆಗಳಾಗಿ ಕಾರ್ಯನಿರ್ವಹಿಸುವುದು, ರೈತರ ಆಯ್ಕೆ ಹಾಗೂ ಉತ್ತೇಜನ, ಪ್ರಾಥಮಿಕ ಸಮೀಕ್ಷೆಯಲ್ಲಿ ಸಹಕರಿಸುವುದು, ಗ್ರಾಮ ಮಟ್ಟದ ಸಭೆಗಳನ್ನು ನಡೆಸುವುದು, ಸ್ಥಳೀಯ ಸಂಪನ್ಮೂಲಗಳ ಮಾಹಿತಿ ಕ್ರೋಢೀಕರಣ, ರೈತರಿಗೆ

ಬೇಸಾಯ ಸಂಬಂದಿತ ಮಾಹಿತಿ ನೀಡುವುದು, ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳಿಗೆ ಸಾಪ್ತಾಹಿಕ ಪ್ರಗತಿ ವರದಿ ಸಲ್ಲಿಸುವುದು, ಗ್ರಾಮ ಸಭೆಗಳನ್ನು ಇಲಾಖೆಯ ಅಧಿಕಾರಿಗಳು/ ಇಕ್ರಿಸ್ಯಾಟ್ ತಂತ್ರಜ್ಞರ ಮಾರ್ಗದರ್ಶನದಲ್ಲಿ ನಿಗದಿತವಾಗಿ ನಡೆಸುವುದು, ರೈತ ಕ್ಷೇತ್ರ ಪಾಠಶಾಲೆ ಅನುಷ್ಠಾನ, ಮುಂದಾಳು ರೈತರ ಆಯ್ಕೆ, ಅವರೊಂದಿಗೆ ಬಿತ್ತನೆ ಚಟುವಟಿಕೆಗಳಲ್ಲಿ ರೈತರಿಗೆ ನೆರವು/ಸಲಹೆ ನೀಡುವುದು, ನಿಗದಿತ ವಹಿಗಳನ್ನು ವ್ಯವಸ್ಥಿತವಾಗಿ ನಿರ್ವಹಿಸುವುದು.

8. ಕೃಷಿ ವಿಜ್ಞಾನ ಕೇಂದ್ರಗಳು: ತಾಂತ್ರಿಕತೆಗಳನ್ನು ಗುರುತಿಸುವುದು, ವಿಸ್ತರಣಾ ಕಾರ್ಯಕರ್ತರು ಹಾಗೂ ರೈತರಿಗೆ ವಿಷಯಾಧಾರಿತ ತರಬೇತಿಗಳನ್ನು ನೀಡುವುದು, ಪೂರಕ ತಾಂತ್ರಿಕ ಮಾಹಿತಿಯ ಕೃತಿಗಳನ್ನು ನೀಡುವುದು, ಹವಾಮಾನ, ಪೀಡೆ, ಮಾರುಕಟ್ಟೆ ಕುರಿತು ಮುನ್ಸೂಚನೆ ನೀಡುವುದು, ಕೆಲವು ಇಲಾಖಾ ಪ್ರಾತ್ಯಕ್ಷಿಕೆಗಳನ್ನು ಕೆ.ವಿ.ಕೆ. ವತಿಯಿಂದ ಏರ್ಪಡಿಸುವುದು, ಕ್ಷೇತ್ರೋತ್ಸವದಲ್ಲಿ ಪಾಲ್ಗೊಳ್ಳುವುದು.

9. ICRISAT ನ ಜಿಲ್ಲಾ ತಾಂತ್ರಿಕ ಅಧಿಕಾರಿ: ಜಿಲ್ಲೆಯಲ್ಲಿ ICRISAT ನ ತಾಂತ್ರಿಕ ಅಧಿಕಾರಿಯು ಎಲ್ಲಾ ತಾಲ್ಲೂಕುಗಳಲ್ಲಿ ತರಬೇತಿಗಳನ್ನು ಸೂಕ್ತ ಸಮಯದಲ್ಲಿ ಏರ್ಪಡಿಸಲು ಕ್ರಮ ಕೈಗೊಳ್ಳುವುದು. ಹೋಬಳಿ ಮತ್ತು ಗುಚ್ಛ ಗ್ರಾಮಗಳಲ್ಲಿ ತರಬೇತಿಯ ಉಸ್ತುವಾರಿ ಮಾಡುವುದು, ಬೆಳೆವಾರು ತಾಂತ್ರಿಕ ಮಾಹಿತಿ ನೀಡುವುದು. ಪ್ರತಿ ವಾರ ಜಿಲ್ಲೆಯ ಪ್ರಗತಿ ಕ್ರೋಢೀಕರಿಸಿ ಕೇಂದ್ರ ಕಛೇರಿಗೆ ಕಳುಹಿಸುವುದು. ಬೆಳೆ ಕಟಾವು ಪ್ರಯೋಗಗಳ ತಾಕುಗಳನ್ನು ಆಯ್ಕೆ ಮಾಡಿ ಬೆಳೆ ಕಟಾವು ಪ್ರಯೋಗಗಳನ್ನು ಕೈಗೊಂಡು ವರದಿಯನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಿಗೆ ಸಲ್ಲಿಸುವುದು. ಯೋಜನಾ ಅನುಷ್ಟಾನದ ವಿವಿಧ ಹಂತಗಳ ದಾಖಲಾತಿ ನಿರ್ವಹಿಸಿ (ಬೆಳೆ ಪರಿಸ್ಥಿತಿ, ಕೀಟರೋಗ ಭಾದೆ, ಛಾಯಾಚಿತ್ರ, ಯಶೋಗಾಥೆ ಇತ್ಯಾದಿ)ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಿಗೆ ಸಲ್ಲಿಸುವುದು.

ಸಹಿ/–

ಕೃಷಿ ನಿರ್ದೇಶಕರು

ಯೋಜನೆ ಅನುಷ್ಠಾನ ವೇಳಾಪಟ್ಟಿ:

| ಕ್ರ.ಸಂ | ಕಾರ್ಯಕ್ರಮಗಳು | ವೇಳಾಪಟ್ಟಿ |
|---|---|---|
| 1 | ಗ್ರಾಮಗಳ ಆಯ್ಕೆ | ಸೆಪ್ಟೆಂಬರ್ ಅಂತ್ಯದೊಳಗೆ |
| 2 | ರೈತ ಅನುವುಗಾರರ ಆಯ್ಕೆ | ಸೆಪ್ಟೆಂಬರ್ ಅಂತ್ಯದೊಳಗೆ |
| 3 | ರೈತರ ನೊಂದಣಿ | ಸೆಪ್ಟೆಂಬರ್ ಎರಡನೇ ಹಾಗೂ ಅಕ್ಟೋಬರ್ ಮೊದಲನೇ ಪಾಕ್ಷಿಕ |
| 4 | ರೈತ ಅನುವುಗಾರರ ತರಬೇತಿ | ಅಕ್ಟೋಬರ್ ಮೊದಲನೇ ಹಾಗೂ ಎರಡನೇ ಪಾಕ್ಷಿಕ |
| 5 | ಗ್ರಾಮ ಮಟ್ಟದಲ್ಲಿ ತರಬೇತಿ | ಸೆಪ್ಟೆಂಬರ್ ಹಾಗೂ ಅಕ್ಟೋಬರ್ |
| 6 | ಪ್ರಚಾರ | ಸೆಪ್ಟೆಂಬರ್ , ಅಕ್ಟೋಬರ್ & ನವೆಂಬರ್ |
| 7 | ಗುಚ್ಛ ಗ್ರಾಮಗಳಲ್ಲಿ ಪರಿಕರಗಳ ದಾಸ್ತಾನು ಹಾಗೂ ವಿತರಣೆ | ಸೆಪ್ಟೆಂಬರ್ , ಅಕ್ಟೋಬರ್ & ನವೆಂಬರ್ |
| 8 | ಬೆಳೆ ಕಟಾವು ಪ್ರಯೋಗ | ಬೆಳೆ ಕೊಯ್ಯಲಿನ ಸಮಯದನ್ವಯ |
| 9 | ಬೆಳೆಯ ವಿವಿಧ ಹಂತಗಳ ದಾಖಲಾತಿ | ಬಿತ್ತನೆಯಿಂದ ಕಟಾವು ಹಂತದವರೆಗೆ |

ಕೃಷಿ ನಿರ್ದೇಶಕರು

# 2013-14 ನೇ ಸಾಲಿನ ಹಿಂಗಾರು ಹಂಗಾಮಿನ ಬೆಳೆವಾರು ಜಿಲ್ಲಾವಾರು ವಿಸ್ತೀರ್ಣ(ಹೆ)

| ಸಂ | ಜಿಲ್ಲೆ | ಹಿಂ.ಜೋಳ | ಕಡಲೆ | ಸೂರ್ಯಕಾಂತಿ | ಕುಸುಬೆ | ಗೋಧಿ | ನೆಲಗಡಲೆ | ಹತ್ತಿ | ಮುಸುಕಿನ ಜೋಳ | ಕಬ್ಬು | ಭತ್ತ | ಜಿಲ್ಲಾ ವರದಿ |
|---|---|---|---|---|---|---|---|---|---|---|---|---|
| 1 | ಬಾಗಲಕೋಟೆ | **50000** | **65000** | **10000** | | | | | | **20000** | | **145000** |
| 4 | ಬೆಳಗಾವಿ | **135000** | **50000** | | | **15000** | | | | | | **200000** |
| 5 | ಬಳ್ಳಾರಿ | **25000** | **65000** | **53000** | **2000** | | | | | | | **145000** |
| 6 | ಬೀದರ್ | **30000** | **46000** | **5000** | **10000** | **9000** | | | | | | **100000** |
| 7 | ಬಿಜಾಪುರ | **200000** | **125000** | | | | | | | | | **325000** |
| 10 | ಚಿಕ್ಕಮಗಳೂರು | **10000** | **10000** | | | | | | | | | **20000** |
| 11 | ಚಿತ್ರದುರ್ಗ | **5000** | **15000** | | | | | | | | | **20000** |
| 13 | ದಾವಣಗೆರೆ | **6500** | **2200** | | | **1000** | | | **800** | | | **10500** |
| 14 | ಧಾರವಾಢ | **35000** | **72000** | **4000** | | **26000** | | | | | | **137000** |
| 15 | ಗದಗ | **60000** | **65000** | **25000** | **3000** | **20000** | | **47000** | | | | **220000** |
| 16 | ಗುಲ್ಬರ್ಗ | **238000** | **175000** | **22000** | **7000** | **8000** | | | | | | **450000** |
| 18 | ಹಾವೇರಿ | **37000** | **3100** | **3900** | | | | | | | | **44000** |
| 21 | ಕೊಪ್ಪಳ | **32000** | **48000** | **25000** | | **7000** | | **15000** | **5000** | | | **132000** |
| 24 | ರಾಯಚೂರು | **133000** | **120000** | **46000** | **5500** | | **34000** | | | | **73000** | **411500** |
| 30 | ಯಾದಗೀರ | **50000** | **45000** | **15000** | | **2000** | **28000** | | | | | **140000** |
| | ಒಟ್ಟು | **1046500** | **906300** | **208900** | **27500** | **88000** | **62000** | **62000** | **5800** | **20000** | **73000** | **2500000** |

# (ಅನುಬಂಧ–2 ಅ)

## ಆಯ್ಕೆಯಾದ ಗುಚ್ಚಗಳ ಎಲ್ಲಾ ರೈತರ ನೊಂದಣಿ ನಮೂನೆ(ಹಿಂಗಾರು ಹಂಗಾಮು)

**ಭಾಗ : 1**

**ಜಿಲ್ಲೆ :**

**ತಾಲ್ಲೂಕು:**

**ಹೋಬಳಿ:**

**ಗುಚ್ಚ ಗ್ರಾಮ:**

**ಗ್ರಾಮ:**

**ರೈತರ/ಸಾಗುವಳಿದಾರರ ಪೂರ್ಣ ಹೆಸರು & ವಿಳಾಸ :**

**ರೈತರ ಕ್ರಮ ಸಂಖ್ಯೆ:**

**ವಿಸ್ತೀರ್ಣ :**

**ಸರ್ವೆ ನಂ:**

**ಭಾಗ: 2 (13–14 ನೇ ಸಾಲಿನ ಮುಂಗಾರು ಮಾಹಿತಿ ಪಡೆಯುವದು)**

1. ಭೂಚೇತನ ತಾಂತ್ರಿಕತೆಗಳನ್ನು ಆಳವಡಿಸಲಾಗಿದೆಯೇ? : ಹೌದು / ಇಲ್ಲಾ
   ಹೌದಾದಲ್ಲಿ ಕೆಳಗಿನ ವಿವರಗಳನ್ನು ಪಡೆಯುವುದು.
2. ಇಲ್ಲಾದಲ್ಲಿ ಅಳವಡಿಸದೇ ಇರಲು ಕಾರಣಗಳು :

| ಸಂ | ವಿವರ | ಬೆಳೆ ತಳಿ ವಿಸ್ತೀರ್ಣ |
|---|---|---|
| 1 | ತೆಗೆದುಕೊಂಡ ಬೆಳೆಗಳ ವಿವರ | 1.<br>2.<br>3.<br>4. |
| | ಕೃಷಿ ಪರಿಕರಗಳ ಬಳಕೆ | 1.<br>2.<br>3. |
| 3 | ಅಳವಡಿಸಿದ ತಾಂತ್ರಿಕತೆಗಳು | 1.<br>2.<br>3. |
| 4 | ಇಳುವರಿ ಪ್ರತಿ ಎಕರೆಗೆ(ಬೆಳೆವಾರು) | |
| 5 | ರೈತ ಕ್ಷೇತ್ರ ಪಾಠಶಾಲೆಯಲ್ಲಿ ಭಾಗವಹಿಸುವಿಕೆ | |
| 6 | ರೈತರ ತಾಕಿನಲ್ಲಿ ಇಲಾಖೆಯ ಪ್ರಾತ್ಯಕ್ಷಿಕೆ ಕೈಗೊಂಡಿದ್ದರೆ ವಿವರ | |
| 7 | ನಿವ್ವಳ ಆದಾಯ | |

## (ಅನುಬಂಧ–2 ಆ)

## ಆಯ್ಕೆಯಾದ ಗುಚ್ಚಗಳ ಎಲ್ಲಾ ರೈತರ ನೊಂದಣಿ ನಮೂನೆ

**ಭಾಗ : 3** (2013 ನೇ ಸಾಲಿನ ಮಾಹಿತಿ ಬೆಳೆ ಋತುವಿನ ನಂತರ ಪಡೆಯುವುದು.)

1. ಭೂಚೇತನ ತಾಂತ್ರಿಕತೆಗಳನ್ನು ಅಳವಡಿಸಲಾಗಿದೆಯೇ? : ಹೌದು / ಇಲ್ಲಾ
   ಹೌದಾದಲ್ಲಿ ಕೆಳಗಿನ ವಿವರಗಳನ್ನು ಪಡೆಯುವುದು.
2. ಇಲ್ಲಾದಲ್ಲಿ ಅಳವಡಿಸದೇ ಇರಲು ಕಾರಣಗಳು :
   1.
   2.
   3.

| ಸಂ | ವಿವರ | ಬೆಳೆ ತಳಿ ವಿಸ್ತೀರ್ಣ |
|---|---|---|
| 1 | ತೆಗೆದುಕೊಂಡ ಬೆಳೆಗಳ ವಿವರ | 1.<br>2.<br>3.<br>4. |
| | ಕೃಷಿ ಪರಿಕರಗಳ ಬಳಕೆ | 1.<br>2.<br>3. |
| 3 | ಅಳವಡಿಸಿದ ತಾಂತ್ರಿಕತೆಗಳು | 1.<br>2.<br>3. |
| 4 | ಇಳುವರಿ ಪ್ರತಿ ಎಕರೆಗೆ(ಬೆಳೆವಾರು) | |
| 5 | ರೈತ ಕ್ಷೇತ್ರ ಪಾಠಶಾಲೆಯಲ್ಲಿ ಭಾಗವಹಿಸುವಿಕೆ | |
| 6 | ರೈತರ ತಾಕಿನಲ್ಲಿ ಇಲಾಖೆಯ ಪ್ರಾತ್ಯಕ್ಷಿಕೆ ಕೈಗೊಂಡಿದ್ದರೆ ವಿವರ | |
| 7 | ನಿವ್ವಳ ಆದಾಯ | |

ಅನುವುಗಾರರ ಹೆಸರು/ಸಹಿ　　　　　　ಕೃಷಿ ಅಧಿಕಾರಿ ಹೆಸರು/ಸಹಿ

# ಅನುಬಂಧ-3

## ರೈತ ಕ್ಷೇತ್ರ ಪಾಠಶಾಲೆ:

*ಭೂಚೇತನ ಯೋಜನೆಯಡಿ ರೈತ ಕ್ಷೇತ್ರ ಪಾಠ ಶಾಲೆ*

*"ಅನುಭವದಿಂದ ಕಲಿಕೆ-ಕೃಷಿ ನಿರತ ರೈತ ಸಮುದಾಯಕ್ಕೆ ಆಧುನಿಕ ತಾಂತ್ರಿಕತೆಗಳು"*

ಘಟಕವಾರು ಅನುದಾನ:

| ಸಂ | ಘಟಕ | ಘಟಕ ವೆಚ್ಚ | ಒಟ್ಟು ಅನುದಾನ(ರೂ) | ವಿವರ |
|---|---|---|---|---|
| 1 | ತರಬೇತಿ ಕಿರುಚೀಲ | 25 ರೈತರುx ರೂ120/- | 3000 | ಪುಸ್ತಕ, ಪೆನ್, ಕಲರ ಕ್ರೇಯಾನ್ ಪೆನ್ಸಿಲ್, ರಬ್ಬರ್, ಕೈಚೀಲ. |
| 2 | ತರಬೇತಿ ವೆಚ್ಚ | 25 ರೈತರು xರೂ10/-x 10 | 2500 | ಲಘು ಉಪಹಾರಕ್ಕೆ |
| 3 | ಕೃಷಿ ಪರಿಕರ | 1500 | 1500 | 1 ಎಕರೆಗೆ ದಾನಿ ರೈತನ ಹೊಲದಲ್ಲಿ ಪ್ರಾತ್ಯಕ್ಷತೆಗಾಗಿ ವಿವರ ಅನುಬಂಧ-3ಅ |
| 4 | ಕ್ಷೇತ್ರೋತ್ಸವ | 100 ರೈತರಿಗೆ xರೂ25/- | 2500 | |
| 5 | ಇತರೇ ವೆಚ್ಚ | | 500 | |
| | ಒಟ್ಟು | | 10000/- | |

ಅನುಬಂಧ-3(ಅ)

ದಾನಿ ರೈತರ ತಾಕಿನಲ್ಲಿ ಕೈಗೊಳ್ಳುವ ಪ್ರಾತ್ಯಕ್ಷತೆ ವಿವರ:

1. ವಿಸ್ತೀರ್ಣ : 1 ಎಕರೆ

| 15 ಗುಂಟೆ | 10ಗುಂಟೆ | 15 ಗುಂಟೆ |
|---|---|---|
| *ಭೂಚೇತನ ತಾಕು:1.ಹೊಸ ತಳಿಗಳಿಗೆ ಆದ್ಯತೆ.<br>* ಭೂಚೇತನ ಶಿಫಾರಸ್ಸಿನ ಪರಿಕರಗಳ ಬಳಕೆ.ಅನ್ವಯ<br>*.ನವೀನ ತಾಂತ್ರಿಕತೆಗಳಿಗೆ ಆದ್ಯತೆ. | ದೀರ್ಘಾವಧಿ ಪ್ರಯೋಗಗಳ ತಾಕು | ರೈತರ ತಾಕು |

ರೈತ ಪಾಠಶಾಲೆ ಅಧಿವೇಶನಗಳಲ್ಲಿ  ಚರ್ಚಿಸಬೇಕಾದ ವಿಷಯಗಳು:

| ತರಬೇತಿ ಸಂಖ್ಯೆ | ವಿಷಯ | ವಿವರ |
|---|---|---|
| 1 | ಪ್ರಾರಂಭಿಕ ಚಟುವಟಿಕೆ ಮತ್ತು ಪೋಷಕಾಂಶಗಳ ಗಣಿಗಾರಿಕೆ ಮತ್ತು ಬೆಳೆ ಪದ್ಧತಿ ಕುರಿತು | ಮಣ್ಣು  ಆರೋಗ್ಯ ಚೀಟಿ ಕುರಿತು ಮಾಹಿತಿ,ಲಘು ಪೋಷಕಾಂಶಗಳ ಬಳಕೆ ಮತ್ತು ಅವಶ್ಯಕತೆ ಕುರಿತು |
| 2 | ಮಣ್ಣು ಮತ್ತು ನೀರು ಸಂರಕ್ಷಣೆ | ಮಣ್ಣು ಸವಕಳಿ ಕುರಿತು ಪ್ರಯೋಗ ಮತ್ತು ಮಣ್ಣು ನೀರು ಹಿಡಿದಿಡುವ ಸಾಮರ್ಥ್ಯ ಕುರಿತು ಪ್ರಯೋಗ, ಇತ್ಯಾದಿ |
| 3 | ಬೀಜ ಆರೋಗ್ಯ | ಬೀಜ ಮೊಳಕೆ ಪ್ರಮಾಣ. ಬೀಜೋಪಚಾರ. ಜೈವಿಕ ಗೊಬ್ಬರ ಬಳಕೆ ಇತ್ಯಾದಿ |
| 4 | ಕೃಷಿ ಪರಿಸರ ಪದ್ದತಿ ಮತ್ತು ಪರಿಕಲ್ಪನೆ | ಜೈವಿಕ ಮತ್ತು ನಿರ್ಜೀವ ಘಟಕಗಳ ನಡುವಿನ ಅಂತರ ಸಂಬಂಧ, ಇತ್ಯಾದಿ |
| 5. | ಕೃಷಿ ಬೆಳೆ ಪರಿಸರ ವಿಶ್ಲೇಷಣೆ | ಬೆಳೆ ವೀಕ್ಷಣೆ,ಸಂಸ್ಕರಣೆ,ಚಿತ್ರೀಕರಣ, ಇತ್ಯಾದಿ |
| 6 | ಸಮಗ್ರ ಪೋಷಕಾಂಶ ನಿರ್ವಹಣೆ | 1.ಬದುಗಳ ಮೇಲೆ ಗ್ಲಿಸ್ರಿಡಿಯಾ ಗಿಡ ನೆಡುವುದು.<br>2.ಕಾಂಪೋಸ್ಟ ಕಲ್ಚರಗಳ ಬಳಕೆ<br>3.ಅಝೋಲಾ ತಯಾರಿಕೆ<br>4 .VAM ತಯಾರಿಕೆ. ಇತ್ಯಾದಿ |
| 7 | ಸಮಗ್ರ ಕೀಟ ನಿರ್ವಹಣೆ | ರೈತ ಮಿತ್ರ ಕೀಟ ಗುರುತಿಸುವಿಕೆ ಮತ್ತು ಹಾಗೂ ಸಂರಕ್ಷಣೆ, ಇತ್ಯಾದಿ |
| 8. | ಸಮಗ್ರ ಪೀಡೆ ನಿರ್ವಹಣೆ | ರೋಗಗಳ ಲಕ್ಷಣ ಗುರುತಿಸುವ್ಯದು ಮತ್ತು ನಿರ್ವಹಣೆ, ಇತ್ಯಾದಿ |
| 9. | ಮಾರುಕಟ್ಟೆ ಸಂಪರ್ಕ, ಕೊಯ್ಲು ನಂತರದ ತಾಂತ್ರಿಕತೆ | ಸಂಸ್ಕರಣೆ ಮತ್ತು ಮಾರುಕಟ್ಟೆ ಕುರಿತು ಮಾಹಿತಿ |
| 10 | ಬೆಳೆ ಪುನಃಶ್ಚೇತನ ಶಕ್ತಿ | ಬೆಳೆ ಕಟಾವು ಸಮೀಕ್ಷೆ |